# ಸಿಹಿ-ಕಹಿಯಾದ ಸಮುದ್ರ ಸ್ನಾನ



ಪುರಿಯ ಗೋಲ್ಡನ್ ಬೀಚ್‌ನಲ್ಲಿ ಖುಷಿ ಖುಷಿಯಾಗಿ ನೀರಿನಲೆಯೊಂದಿಗೆ ಆಟವಾಡುತ್ತಿದ್ದಾಗ ಜೋರಾದ ಅಲೆಯ ರಭಸಕ್ಕೆ ನೀರಿನಲ್ಲಿ ಬಿದ್ದುಬಿಟ್ಟೆ. ವೀಡಿಯೊ ಕ್ಯಾಮೆರಾ, ಮೊಬೈಲ್, ಪರ್ಸ್ ಎಲ್ಲವನ್ನೂ ಕಳೆದುಕೊಂಡೆ ಎಂದುಕೊಂಡೆ. ಮೀನುಗಾರರು ಬಂದು ರಕ್ಷಿಸಿದರು. ನನ್ನ ಭುಜದಲ್ಲಿದ್ದ ಬ್ಯಾಗ್ ಗೆಳತಿ ರತ್ನಾಳ ಬಳಿ ಇತ್ತು. ಸಿಹಿಯೊಂದಿಗೆ ಕಹಿ ಅನುಭವವೂ ಆದ ಪ್ರವಾಸ ಆಗಿದ್ದರೂ ಈಗ ಅದು ಸವಿನೆನಪುಗಳ ಆಗರ..!

■ **ಸೀತಾ ಎಸ್. ನಾರಾಯಣ**

ಪ್ರವಾಸ ಸಾಮಾನ್ಯವಾಗಿ ಎಲ್ಲರಿಗೂ ಖುಷಿ ಕೊಡುವ ವಿಚಾರವೇ. ನಾವು 2008 ರ ಅಕ್ಟೋಬರ್ ನಲ್ಲಿ 32 ದಿನಗಳ ಉತ್ತರ ಭಾರತದ ಪ್ರವಾಸ ಕೈಗೊಂಡಿದ್ದೆವು. ಬೆಂಗಳೂರಿನಿಂದ ಹೊರಟ ನಮ್ಮ ಪ್ರವಾಸದಲ್ಲಿ ಆಗ್ರಾ, ದೆಹಲಿ, ನೇಪಾಳ, ಕಾಶಿ, ಬದರಿ, ಕೇದಾರ, ಕಲ್ಕತ್ತಾ, ಭುವನೇಶ್ವರ ಮುಂತಾದವುಗಳನ್ನೆಲ್ಲಾ ನೋಡಿ ಆನಂದಿಸಿ ಅಂದು ಬೆಳಿಗ್ಗೆ ಪುರಿಗೆ ಬಂದೆವು. ಇನ್ನೇನು ಪ್ರವಾಸ 4–5 ದಿನದಲ್ಲಿ ಮುಗಿದು ಮನೆಗೆ ಹಿಂದಿರುಗುತ್ತಿದ್ದೆವು. ಎಲ್ಲಿಯೂ ಪ್ರವಾಸಿಗರಿಗೆ ತೊಂದರೆ, ಅಪಾಯವಾಗದಂತೆ ಏರ್ಪಾಡಾಗಿತ್ತು. ಅದರಲ್ಲೂ ಹಿರಿಯ ನಾಗರಿಕರೂ ಇರುವುದರಿಂದ ಮುತುವರ್ಜಿ ಹೆಚ್ಚಾಗಿಯೇ ಇರುತ್ತದೆ. ಆದರೆ....ಹೀಗೂ ಆಗಿ ಬಿಡುತ್ತದೆ.

ಹಿಂದೂಗಳಿಗೆ ಪುರಿಯಲ್ಲಿ ಬಹು ಮುಖ್ಯವಾದದ್ದು ಜಗನ್ನಾಥನ ದರ್ಶನ. ಅಲ್ಲಿಯ ನೈವೇದ್ಯವಂತೂ ಸುಪ್ರಸಿದ್ಧ. ಮಧ್ಯಾಹ್ನ ಸುಭದ್ರೆ, ಬಲರಾಮರೊಂದಿಗೆ ಜಗದೊಡೆಯನನ್ನು ಕಣ್ಮನದಲ್ಲಿ ತುಂಬಿಕೊಂಡು [ಕ್ಯಾಮೆರಾ ಒಯ್ಯುವಂತಿರಲಿಲ್ಲ] ಆ ಅದ್ಭುತ ದೇವಾಲಯದ ವೀಕ್ಷಣೆಯ ನಂತರ, ಸಂಜೆ ಪುರಿಯ ಪ್ರಸಿದ್ಧವಾದ 'ಗೋಲ್ಡನ್ ಬೀಚ್'ಗೆ ಹೋದೆವು.

ಸಾವಿರಾರು ಜನರನ್ನು ಆಕರ್ಷಿಸುವ ಸುಂದರವಾದ ಆ ಬೀಚ್ ನ ಪ್ರಮುಖ ಆಕರ್ಷಣೆ ಬಂಗಾರ ಬಣ್ಣದ ಮರಳು, ಸ್ವಚ್ಛ ಸುಂದರ ಸಮುದ್ರ, ಸೂರ್ಯೋದಯ ಹಾಗೂ ಸೂರ್ಯಾಸ್ತ. ಪ್ರಶಾಂತವೆನಿಸಿ ಮನವನ್ನು ಶಾಂತಗೊಳಿಸಿ ಮುದ ನೀಡುವ ಆ ವಾತಾವರಣ ಆ ಸಂಜೆಯನ್ನು ಮತ್ತಷ್ಟು ಸುಂದರಗೊಳಿಸಿತ್ತು, ಸಣ್ಣ ಸುಳಿಯೊಂದಿಗೆ ಮೊರೆಯಿಡುತ್ತಾ ಬರುವ ಶಕ್ತಿಯುತ ಅಲೆಗಳಿದ್ದರೂ ಅವು ದಡಕ್ಕೆ ಬರುವ ಹೊತ್ತಿಗೆ ಏನೂ ಅಪಾಯವಿಲ್ಲವೆಂದುಕೊಂಡೆವು. ಸಮುದ್ರ ನಮ್ಮನ್ನು ಕೈಬೀಸಿ ಕರೆಯಿತು. ಚಪ್ಪಲಿ ದಡದಲ್ಲಿ ಬಿಟ್ಟು ಮೆಲ್ಲಗೆ ನೀರಿಗಿಳಿದ ನನಗೆ ನಮ್ಮವರು 'ಹೆದರುವಂತದ್ದೇನಿದೆ?' ಎಂದು ಮುಂದೆ ಹೋಗಲು ಮತ್ತಷ್ಟು ಧೈರ್ಯ ಹೇಳಿ ಫೋಟೋ ತೆಗೆಯಲು ದಡದ ಕಡೆ ಹೋದರು. ಶಾಂತವಾಗಿ ಬರುತ್ತಿದ್ದ ಅಲೆಗಳೊಂದಿಗೆ ಖುಷಿಪಡುತ್ತಿದ್ದ ನನ್ನೊಂದಿಗೆ ಮತ್ತಿಬ್ಬರು ಗೆಳತಿಯರೂ ಬಂದರು. ಅವರಿಗೆ ಧೈರ್ಯ ನೀಡುತ್ತಾ ನಾನು ಎಲ್ಲರಿಗಿಂತ ಮುಂದಿದ್ದೆ. ಒಬ್ಬರಿನ್ನೊಬ್ಬರ ಕೈ ಹಿಡಿದು ನಿಂತಿದ್ದ ನಮಗೆ ಅಲೆಗಳ ಸ್ಪರ್ಶ ಆನಂದ ನೀಡುತ್ತಿತ್ತು. ಬೆಳಿಗ್ಗೆಯಿಂದ ಬಿಸಿಲ ಬೇಗೆಗೆ ಬಸವಳಿದಿದ್ದ ನಮಗೆ ಅದು ಮತ್ತಷ್ಟು ಹಿತವೆನಿಸಿತ್ತು. ಫೋಟೋಗೆ ಪೋಸ್ ಕೊಡಲು ನಾನು ಸಮುದ್ರದೆಡೆಗೆ ಸ್ವಲ್ಪ ಸ್ವಲ್ಪವೇ ಸರಿಯುತ್ತಿದ್ದೆ, ಸಣ್ಣ ಸಣ್ಣ ಅಲೆಗಳು ಬಂದು ಕಾಲಿಗೆ ಬಡಿದು ಪಾದದ ಕೆಳಗೆ ಮರಳು ಸರಿಯುವ ಆನಂದವನ್ನು ಅನುಭವಿಸುತ್ತಾ ಖುಷಿಯಿಂದ ಕಿರುಚುತ್ತಿದ್ದೆವು. ನಾವೇ ಮುಂದೆ ಹೋದೆವೋ, ಸಂಜೆಯಾಗುತ್ತಾ ಬಂದಂತೆ ಭೋರ್ಗರೆವ ದೊಡ್ಡ ದೊಡ್ಡ ಅಲೆಗಳೇ ಬಂದವೋ ಆ ಜಗನ್ನಾಥನಿಗೆ ಗೊತ್ತು. ಕೇವಲ ಮಂಡಿವರೆಗೆ ನೆನೆಯುವ ಆಲೋಚನೆಯಿಂದ ವ್ಯಾನಿಟಿ ಬ್ಯಾಗನ್ನು ಭುಜಕ್ಕೆ ಹಾಕಿಕೊಂಡೇ ನೀರಿಗಿಳಿದ ನಮ್ಮನ್ನು, ದೊಡ್ಡ ಅಲೆಯೊಂದು ಸೊಂಟದವರೆಗೆ ಮುಳುಗಿಸಿ, ಆಯತಪ್ಪಿ ಒಬ್ಬರಿನ್ನೊಬ್ಬರ ಕೈಹಿಡಿದಿದ್ದರಿಂದ ಎಲ್ಲರೂ ಬಿದ್ದುಬಿಟ್ಟೆವು. ನಮ್ಮೊಂದಿಗೆ ಹಣ, ಸಾವಿರಾರು ರೂಪಾಯಿಗಳ ಮೊಬೈಲ್, ವಿಡಿಯೋ ಕ್ಯಾಮರಾಗಳು ಎಲ್ಲವೂ ಸಮುದ್ರದಲ್ಲಿ ಮುಳುಗಿತು.

ಸಮುದ್ರದಲ್ಲಿ ಅಂಗಾತ ಬಿದ್ದ ನನಗೆ ಸುತ್ತಲಿನದೇನೂ ಕಾಣುತ್ತಿಲ್ಲ, ಮೇಲೆ ಅನಂತ ಆಕಾಶವೇ ಆಕಾಶ. ಕೆಳಗೆ ಮರಳು ಸರಿಯುತ್ತಿದೆ, ಎದ್ದೇಳಲು ಆಗುತ್ತಲೇ ಇಲ್ಲ, ನೀರಿನಲ್ಲಿ ಕರೆಂಟ್ ಇರುತ್ತೆ ಅದು ಸೆಳೆಯುತ್ತೆ ಮುಳುಗಿಸುತ್ತೆ ಎಂದು ಕೇಳಿದ್ದೆ. ನನ್ನ ಕಥೆ ಮುಗಿಯಿತು ಎಂದು ಕೊಳ್ಳುವ ಹೊತ್ತಿಗೆ ಒಂದು ಕೈಲಿ ಕ್ಯಾಮರಾ ಹಿಡಿದಿದ್ದ ನನ್ನವರು ಒಂದು ಕೈ ಕೊಟ್ಟು ಎತ್ತಲು ನೋಡಿದರು. ಹು..ಹುಂ..ಒಂದಿಂಚೂ ನನಗೆ ಮೇಲೇಳಲಾಗಲಿಲ್ಲ. ಅಬ್ಬಾ ನಾನಿಷ್ಟೊಂದು ಭಾರವಿರುವೆನೇ..? ನೀರು ಬಂದು ಹೊಡೆಯುತ್ತಲೇ ಇದೆ ಸಮುದ್ರದೊಳಗೆ ಸರಿಯುತ್ತಲೇ ಇದ್ದೇನೆ. ಅಷ್ಟರಲ್ಲಿ ಅಲ್ಲೇ ಇದ್ದ ಮೀನುಗಾರರು ಬಂದು ಎತ್ತಿದಾಗ ಅವರು ಕೇಳಿದಷ್ಟು ಹಣವನ್ನು ಪತಿರಾಯರು ಮಾತನಾಡದೇ ತೆಗೆದುಕೊಟ್ಟರು. ಈ ಗಲಾಟೆಯಲ್ಲಿ ಎಡ ಭುಜದಲ್ಲಿದ್ದ ನನ್ನ ಬ್ಯಾಗ್ ಇಲ್ಲ. ಹೊರಟೇ ಹೋಯಿತು ಎಂದುಕೊಂಡರೆ ಯಾವುದೋ ಮಾಯದಲ್ಲಿ ನನ್ನ ಪಕ್ಕದಲ್ಲಿದ್ದ ರತ್ನ ಅವರ ಕೈಯಲ್ಲಿತ್ತು. ಅವರ ಕೈಗೆ ಹೇಗೆ ಹೋಯಿತೋ ಗೊತ್ತಿಲ್ಲ.

ಮೇಲೆ ಬಂದು ನಗುತ್ತಾ ಎಲ್ಲವನ್ನೂ ಒಣಗಿಸುವ, ಮರಳನ್ನು ಕೊಡವಿ ಕೊಳ್ಳುವ ಸಂಭ್ರಮ. ಅಷ್ಟು ಹೊತ್ತಿಗೆ ಸೂರ್ಯ ಮುಳುಗುವ ಸಂಭ್ರಮ ದಲ್ಲಿದ್ದ. ಸುಂದರವಾದ ಅವನೊಂದಿಗೆ ನಾವು ಫೋಟೊ ತೆಗೆಸಿಕೊಂಡೆವು. ಮಾರನೆ ದಿನ ನನ್ನವರು 'ಈಗ್ಯಾಕೆ' ಎಂದು ಕೇಳದೆ, ನಾನು ಇಷ್ಟಪಟ್ಟ ಕಾಟನ್ ಸೀರೆ ಕೊಡಿಸಿದರು. ನಮ್ಮ ಜೊತೆಯಲ್ಲಿದ್ದವರೆಲ್ಲಾ 'ಎಲ್ಲಿ ಬಿದ್ದಿರಿ ನಮಗೂ ತೋರಿಸಿ. ನಾವೂ ಬಿದ್ದು ಬರುತ್ತೇವೆ. ಹತ್ತು ವರ್ಷ ಚಿಕ್ಕವರಾಗಿ ಕಾಣುತ್ತಿದ್ದೀರಿ' ಎಂದಾಗ ಮತ್ತೊಮ್ಮೆ ನಾವೆಲ್ಲಾ ನಗೆಗಡಲಲ್ಲಿ ಮುಳುಗಿದೆವು. ಊರಿಗೆ ಬಂದು ಫೋಟೋಗಳನ್ನು ನೋಡಿದರೆ ಕಹಿ ನೆನಪಾಗಬಹುದಾಗಿದ್ದ ಆ ಕ್ಷಣ ಸವಿನೆನಪಾಗಿ ಸೆರೆಯಾಗಿತ್ತು. ■